**ದಿಃ27-04-15 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು.**

ಪಾಟೀ ಸವಾಲುಃ ಶ್ರೀ ಟಿ ಕೆ ಎಂ ವಕೀಲರಿಂದ ಃ

ಈ ದಾವೆಯನ್ನು ಯಾವ ಸರ್ವೆ ನಂಬರ್‌ಗೆ ದಾವೆ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಸರ್ವೆ ನಂಬರ್ ಗೊತ್ತಾಗುವುದಿಲ್ಲವೆಂದು ಹೇಳಿರುತ್ತಾರೆ. ಈ ದಾವೆಯನ್ನು 20 ಇಂಟು 30ಅಡಿ ಜಾಗಕ್ಕೆ ಮಾಡಿರುತ್ತಾರೆ. ಮೇಲೆ ಹೇಳಿದ 20 ಇಂಟು 30ಅಡಿಯ ಜಾಗಕ್ಕೆ ಚಕ್ಕುಬಂದಿ ಹೇಳಲು ನನಗೆ ಗೊತ್ತಾಗುವುದಿಲ್ಲ. 1ನೇವಾದಿ ನಾರಾಯಣಪ್ಪನ ಮನೆಯನ್ನು ನಾನು ನೋಡಿದ್ದೇನೆ. 1ನೇ ವಾದಿಯ ಮನೆಯ ಪ.ಕ್ಕೆ- ದಾರಿ ಇರುತ್ತದೆ. ವಾದಿ ಮನೆಯ ದ.ಕ್ಕೆ- ಸೀಳುಹಾದಿ ಇರುತ್ತದೆ. ಸದರಿ ಸೀಳು ಹಾದಿ ತುಂಬಾಗಾನಹಳ್ಳಿಗೆ ಹೋಗುತ್ತದೆ. ನನ್ನ ಮನೆಯ ಮುಂಚೆ ರಂಗಣ್ಣನ ಮನೆ ಇರುತ್ತದೆ. ನಾನು ವಾಸ ಮಾಡುವ ಮನೆಯ ಬಾಗಿಲು ಪಶ್ಚಿಮಕ್ಕೆ ಇರುತ್ತದೆ ಎಂದರೆ ಸರಿ. ನನ್ನ ಮನೆಯಿಂದ 7-8ಮನೆಗಳು ಆದ ನಂತರ ನರಸೇಗೌಡರು ಮತ್ತು ರಮೇಶನ ಮನೆ ಬರುತ್ತದೆ. ನಾನು ನರಸೇಗೌಡ ಮತ್ತು ರಮೇಶರವರ ಮನೆಯ ದಕ್ಷಿಣ ದಿಕ್ಕಿನಲ್ಲಿ ಓಡಾಡುತ್ತಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಯ ಹೆಂಡತಿ ರಾಮಕ್ಕ ಮನೆ ಕಟ್ಟಿ 7-8ವರ್ಷ ಆಗಿರುತ್ತದೆ. 1ನೇ ಪ್ರತಿವಾದಿಯ ಹೆಂಡತಿಗೆ ಅವರು ಕಟ್ಟಿರುವ ಮನೆಯ ಜಾಗ ಹೇಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ದೊಡ್ಡಬಳ್ಳಾಪುರದ ಗಾಟಿಗೆ ಮದುವೆ ಆಗಿರುತ್ತೇನೆ , ಆದರೆ ಅಲ್ಲಿ ವಾಸವಾಗಿರುವುದಿಲ್ಲ.

ನಾನು, ವಾದಿ ನಾರಾಯಣಪ್ಪನವರ ಜಮೀನು ಖರೀದಿ ಮಾಡಿ ಸು.2ವರ್ಷವಾಗಿರುತ್ತದೆ. ಆದರೆ 15ದಿನಗಳ ಹಿಂದೆ ನಾನು ಸದರಿ ಜಮೀನನ್ನು ನೊಂದಣಿ ಮಾಡಿಸಿಕೊಂಡಿದ್ದೇನೆ. ವಾದಿ ನನ್ನ ಪರವಾಗಿ ಸಾಕ್ಷಿ ಹೇಳದಿದ್ದರೆ ಜಮೀನನ್ನು ನೊಂದಣಿ ಮಾಡಿಕೊಡುವುದಿಲ್ಲವೆಂದು ಹೇಳಿದ್ದರು ಎಂದರೆ ಸರಿಯಲ್ಲ. 1ನೇಪ್ರತಿವಾದಿಯ ಹೆಂಡತಿ 20ಅಡಿ ಜಾಗದಲ್ಲಿ ಮನೆ ಕಟ್ಟಿದ್ದಾರೆ. ಪೂರ್ವ-ಪಶ್ಚಿಮ 20ಅಡಿ ಮತ್ತು ಉತ್ತರ-ದಕ್ಷಿಣ

30ಅಡಿಯಲ್ಲಿ ಮನೆಯನ್ನು ಕಟ್ಟಿದ್ದಾರೆ. ಪ್ರತಿವಾದಿಗಳಿಗೆ ಪೂರ್ವ-ಪಶ್ಚಿಮ 36ಅಡಿ , ಉತ್ತರ-ದಕ್ಷಿಣ 42ಅಡಿ ನಿವೇಶನ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯು ಪೂರ್ವಜರ ಆಸ್ತಿ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗಳ ಪಿತ್ರಾರ್ಜಿತ ಒಟ್ಟು ಆಸ್ತಿಯ ಪೂ-ಪ 72ಅಡಿ , ಉ-ದ 42ಅಡಿ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಮೇಲೆ ಹೇಳಿದ ಒಟ್ಟು ಆಸ್ತಿಯ ಪೂರ್ವಾ ಅರ್ಧ ಪ್ರತಿವಾದಿಯ ಚಿಕ್ಕಪ್ಪನ ಹಿಸ್ಸೆಗೆ ಮತ್ತು ಉಳಿದ ಅರ್ಧ ಪ್ರತಿವಾದಿ ಹಿಸ್ಸೆಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯ ಚಿಕ್ಕಪ್ಪ ತನ್ನ ಹಿಸ್ಸೆಯ ಜಮೀನನ್ನು ಲಕ್ಷ್ಮೀನರಸಯ್ಯ ಮತ್ತು ಮಂಜುನಾಥ್‌ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಮಂಜುನಾಥ್‌ರವರು ತಾನು ಖರೀದಿ ಮಾಡಿದ ಜಾಗದಲ್ಲಿ ಮನೆ ಕಟ್ಟಿದ್ದಾರೆ ಎಂದರೆ ಸರಿ. ಮಂಜುನಾಥ್‌ರವರ ಮನೆಯ ಉ.ಕ್ಕೆ - ಲಕ್ಷ್ಮೀನರಸಯ್ಯನವರು ಖರೀದಿ ಮಾಡಿದ ಜಾಗ ಇದೆ ಎಂದರೆ ಸರಿಯಲ್ಲ. ಮಂಜುನಾಥ್‌ರವರ ಮನೆಯ ಬಾಗಿಲು ಪೂರ್ವಕ್ಕೆ ಇರುತ್ತದೆ. ಪ್ರತಿವಾದಿಯ ಹೆಂಡತಿ ಕಟ್ಟಿರುವ ಮನೆಯ ಪೂ.ಕ್ಕೆ- ಲಕ್ಷ್ಮೀನರಸಯ್ಯನವರು ಖರೀದಿ ಮಾಡಿದ ನಿವೇಶನ ಬರುತ್ತದೆ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಎಷ್ಟು ರೆವಿನ್ಯೂ ರಸ್ತೆ ಮತ್ತು ಎಷ್ಟು ಗ್ರಾಮಪಂಚಾಯತಿ ರಸ್ತೆ ಇದೆ ಎಂದು ಗೊತ್ತಿರುವುದಿಲ್ಲ. ನಮ್ಮ ಊರಿನಲ್ಲಿ ಕೇವಲ ಒಂದೇ ಒಂದು ಗ್ರಾಮ ಪಂಚಾಯತಿ ರಸ್ತೆ ಇದೆ ಎಂದರೆ ಸರಿಯಲ್ಲ.

ತಿಮ್ಮನಹಳ್ಳಿಯಲ್ಲಿ ಹಳೆಯ ಗ್ರಾಮಠಾಣಾದ ಪೂರ್ವ-ಪಶ್ಚಿಮಕ್ಕೆ ಕಾಲುದಾರಿ ಇರುತ್ತದೆ ಎಂದರೆ ಸರಿಯಲ್ಲ. ಕಾಲುದಾರಿಯ ಪೂ.ಕ್ಕೆ- ಎ.ಕೆ.ಕಾಲೋನಿ ಬರುತ್ತದೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ವಿಚಾರ ಏನು ಗೊತ್ತಿಲ್ಲದೇ ಇದ್ದರೂ ಸಹಾ ನಾನು 1ನೇ ಪ್ರತಿವಾದಿಯಿಂದ ಜಮೀನು ಖರೀದಿ ಮಾಡಿರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು 1ನೇ ಪ್ರತಿವಾದಿಯ ಉಳಿಕೆ ಜಮೀನನ್ನು ಪಾಲಿಗೆ ಮಾಡುತ್ತಿರುವುದರಿಂದ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. 1ನೇಪ್ರತಿವಾದಿಯ ಹಳೆಯ ಮನೆ ಮತ್ತು ಅತನು ಹೊಸದಾಗಿ ನಿರ್ಮಾಣ

ಮಾಡಿದ ಜಾಗದಲ್ಲಿ ಯಾವುದೇ ಕಾಲುದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಯಾವ ಯಾವ ಸರ್ವೆ ನಂಬರ್‌ಗಳಲ್ಲಿ ರಸ್ತೆಗಳು ಇರುತ್ತವೆಂದು ನನಗೆ ಗೊತ್ತಿರುವುದಿಲ್ಲ.

ಮರು ವಿಚಾರಣೆಃ ಇಲ್ಲ-

ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ,

ಸಿ ಜೆ ಕೊರಟಗೆರೆ.